**ಸಿ. ಸಿ. ನಂ. 2053/2024**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ:** 10-09-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟಿ ಸವಾಲು: ಆರೋಪಿ ಪರ ಶ್ರೀ ಕೆ ಎಸ್ ಎಂ., ವಕೀಲರಿಂದ</u>**

ನಾನು ನಮ್ಮ ಸೊಸೈಟಿಯಲ್ಲಿ 18 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಮ್ಮ ಸೊಸೈಟಿಗೆ ನಿರ್ದೇಶಕರ ಮಂಡಳಿ ಇರುತ್ತದೆ ಅಂದರೆ ಸರಿ. ನಮ್ಮ ಸೊಸೈಟಿಯಲ್ಲಿ ಸಾಲ ಕೊಡುವುದಕ್ಕೂ ಮೊದಲು ಅರ್ಜಿ ಪಡೆಯಲಾಗುತ್ತದೆ ಅಂದರೆ ಸರಿ. ಸದರಿ ಅರ್ಜಿಯೊಂದಿಗೆ ಅರ್ಜಿದಾರರ ಆಧಾರ ಕಾರ್ಡ ಮತ್ತು ಪಾನ್ ಕಾರ್ಡ ನ ನಕಲು ಪಡೆಯುತ್ತೇವೆ. ಅರ್ಜಿದಾರ ಯಾವ ವಿಧಧ ಸಾಲವನ್ನು ಕೋರಿರುತ್ತಾರೋ ಅದಕ್ಕೆ ಸಂಬಂಧಿಸಿ ದಾಖಲೆಗಳನ್ನು ಪಡೆಯುತ್ತೇವೆ. ಆರೋಪಿ ಪಿಗಮಿ ಖಾತೆಯ ಆಧಾರದ ಮೇಲೆ ಸಾಲ ಪಡೆದಿರುತ್ತಾರೆ. ಸಾಲದ ಅರ್ಜಿ ಪಡೆದ ನಂತರ ನಿರ್ದೇಶಕರ ಮಂಡಳಿ ಸಾಲ ಕೊಡಬೇಕೋ ಇಲ್ಲವೋ ಎಂಬುದರ ಬಗ್ಗೆ ತೀರ್ಮಾನ ಮಾಡುತ್ತದೆ ಅಂದರೆ ಸರಿ. ಸಾಲ ಮಂಜೂರಾದಾಗ ಸೊಸೈಟಿಯ ಲೆಡ್ಜರ್ ಪುಸ್ತಕದಲ್ಲಿ ನಮೂದು ಮಾಡುತ್ತೇವೆ ಅಂದರೆ ಸರಿ.

ಸಾಲ ಪಡೆಯುವ ವ್ಯಕ್ತಿ ನಮ್ಮ ಸೊಸೈಟಿಯ ಸದಸ್ಯನಾಗಿರಲೇ ಬೇಕು. ಸದಸ್ಯರಿಗೆ ಗುರುತಿನ ಚೀಟಿಯನ್ನು ನೀಡುವುದಿಲ್ಲ. ಸಾಕ್ಷಿ ಮುಂದುವರೆದು ಅವರಿಂದ ಅರ್ಜಿಯನ್ನು ಮಾತ್ರ ಪಡೆಯುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ ನಮ್ಮ ಸೊಸೈಟಿಯ ಸದಸ್ಯ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಅಂದರೆ ಸರಿ.

**ಸಿ. ಸಿ. ನಂ. 2053/2024**
**ಪಿ ಡಬ್ಲ್ಯೂ: 1**

ಆರೋಪಿ ಸಾಲದ ಖಾತೆ ಎಸ್ ಆರ್ ಎಲ್ ನಂ. **1599/2018** ರಲ್ಲಿ, ದಿಃ **06-08-2018** ರಂದು ಸಾಲ ಪಡೆದಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ್ಟೇಟ್ ಮೆಂಟ್ ಆಫ್ ಅಕೌಂಟ್ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಲದ ಪತ್ರ ಅಂದರೆ ಪ್ರಾಮಿಸರಿ ನೋಟ್ ನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿ.

ಆರೋಪಿ ದಿಃ **02-03-2020** ರವರೆಗೆ ರೂ. **3,45,000/-** ಗಳನ್ನು ಕಂತುಗಳಲ್ಲಿ ಕಟ್ಟಿರುತ್ತಾನೆ ಎಂದು ದೂರಿನಲ್ಲಿ ಬರೆಸಿರುತ್ತೇನೆ ಅಂದರೆ ಸರಿ. ಸದರಿ ಹಣವನ್ನು ಆರೋಪಿ ಯಾವ ರೀತಿ ಪಾವತಿ ಮಾಡಿರುತ್ತಾನೆ ಎಂದು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಸ್ಟೇಟ್ ಮೆಂಟ್ ಆಫ್ ಅಕೌಂಟ್ ನಲ್ಲಿ ಹಣದ ವ್ಯವಹಾರವನ್ನು ಮಾತ್ರ ನಮೂದಿಸಲಾಗುತ್ತದೆ ಅಂದರೆ ಸರಿ. ನೋಟಿಸ್ ಯಾವ ದಿನದಂದು ಕೊಡಲಾಗಿದೆ ಎಂದು ಸ್ಟೇಟ್ ಮೆಂಟ್ ನಲ್ಲಿ ನಮೂದು ಮಾಡುವುದಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ನೋಟಿಸ್ ನ ಖರ್ಚನ್ನು ಸ್ಟೇಟ್ ಮೆಂಟ್ ನಲ್ಲಿ ನಮೂದಿಸುತ್ತೇವೆ ಎಂದು ನುಡಿಯುತ್ತಾರೆ.

ನಾವು ಆರೋಪಿಗೆ ನೀಡಿದ ನೋಟಿಸ್ ನ ಅಂಚೆ ರಸೀದಿಯನ್ನು ಹಾಜರುಪಡಿಸಿರುತ್ತೇನೆ. ನ್ಯಾಯಾಲಯದ ಮುಂದೆ ಸದರಿ ಅಂಚೆ ರಸೀದಿ ಇರುವುದಿಲ್ಲ ಅಂದರೆ ಸರಿ. ದಿಃ **05-01-2024** ರಂದು ಆರೋಪಿಗೆ ನೀಡಲಾಗಿತ್ತು ಎನ್ನಲಾದ ನೋಟಿಸ್ ನ ಅಂಚೆ ರಸೀದಿ ಮತ್ತು ಸ್ವೀಕೃತ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ನ್ಯಾಯಾಲಯದ ಮುಂದೆ ಸದರಿ ದಾಖಲೆಗಳು ಇರುವುದಿಲ್ಲ ಅಂದರೆ ಸರಿ.

ನಿಪಿಃ 6 ರಲ್ಲಿ ಸಾಲ ಯಾವಾಗ ಪಡೆಯಲಾಯಿತು, ಎಷ್ಟು ಪಡೆಯಲಾಡಯಿತು, ಎಷ್ಟು ಹಣ ಮರು ಪಾವತಿಯಾಗಿದೆ ಎಂದು ನಮೂದಿಸಿಲ್ಲ ಅಂದರೆ ಸರಿಯಲ್ಲ.

ಆರೋಪಿ ಎಷ್ಟು ಕಂತುಗಳಲ್ಲಿ ಹಣವನ್ನು ಕಟ್ಟಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಸದರಿಯವರು ಪಿಗಮಿ ಕಟ್ಟುತ್ತಿದ್ದರು ಮತ್ತು ಆ ರೀತಿ ನಿಯಮಿತವಾಗಿ ಕಟ್ಟುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಪಿಗಮಿ ಖಾತೆಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನಾವು 3 ರಿಂದ 6 ತಿಂಗಳ ಅವಧಿಯಲ್ಲಿ ಕಂತುಗಳನ್ನು ಕಟ್ಟದಿದ್ದರೆ ನೋಟಿಸ್ ನ್ನು ನೀಡುತ್ತೇವೆ. ದಿಃ 02-03-2020 ರ ನಂತರ ಆರೋಪಿಗೆ 2 ಬಾರಿ ನೋಟಿಸ್ ನೀಡಿರುತ್ತೇವೆ. ಆ ರೀತಿ 2022 ರಲ್ಲಿ ಒಂದು ಬಾರಿ ಮತ್ತು 2023 ರಲ್ಲಿ ಒಂದು ಬಾರಿ ನೋಟಿಸ್ ನೀಡಿರುತ್ತೇವೆ. 2022 ಮತ್ತು 2023 ರಲ್ಲಿ ನೀಡಲಾಗಿತ್ತು ಎನ್ನಲಾದ ನೋಟಿಸ್ ಗಳಿಗೆ ಸಂಬಂಧಿಸಿದ ಅಂಚೆ ರಸೀದಿ ಮತ್ತು ಸ್ವೀಕೃತಿಯನ್ನು ಹಾಜರುಪಡಿಸಿಲ್ಲ ಅಂದರೆ ಸರಿ.

ನಮ್ಮ ಸೊಸೈಟಿಯವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ಸಂಘದವರ ಮುಂದೆ ದಾವೆ ಸಲ್ಲಿಸಬೇಕು ಅಂದರೆ ಸರಿ. ಸಾಕ್ಷಿ ಮುಂದುವರೆದು ಆಸ್ತಿಗಳ ಮೇಲೆ ಸಾಲ ಪಡೆದಾಗ ಅಲ್ಲಿ ದಾವೆ ಸಲ್ಲಿಸುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸಂಘದ ಮುಂದೆ ದಾವೆ ಸಲ್ಲಿಸಲು ಕಾಲಪರಿಮಿತಿ ಇರುತ್ತದೆ ಅಂದರೆ ಸರಿ. ಕಾಲಪರಿಮಿತಿ ಅವಧಿ 6 ವರ್ಷಗಳು ಇರುತ್ತದೆ ಅಂದರೆ ಸರಿ.

**2018** ರಿಂದ ಇಲ್ಲಿಯವರೆಗೆ ಆರೋಪಿಯ ವಿರುದ್ಧ ಸದರಿ ಸಂಘದ ಮುಂದೆ ಅಥವಾ ಸಿವಿಲ್ ನ್ಯಾಯಾಲಯದಲ್ಲಿ ಹಣ ವಸೂಲಿ ಮಾಡಲು ದಾವೆ ಸಲ್ಲಿಸಿಲ್ಲ ಅಂದರೆ ಸರಿ.

ಪ್ರಕರಣದಲ್ಲಿನ ಚೆಕ್ ನ್ನು ಆರೋಪಿಗೆ ಸಾಲ ಮಂಜೂರು ಮಾಡಿದಾಗ ಭದ್ರತೆಗಾಗಿ ಪಡೆದಿದ್ದೇವು ಅಂದರೆ ಸರಿಯಲ್ಲ. ದಿಃ **05-01-2024** ರಂದು ಆರೋಪಿಗೆ ನೀಡಿರುವ ನೋಟಿಸ್ ನಾನೇ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ಸಂಘದವರ ಮುಂದೆ ದಾವೆ ಸಲ್ಲಿಸಲು ಕಾಲ ಪರಿಮಿತಿಯೊಳಗೆ ಇರಬೇಕಾಗಿರುವುದರಿಂದ ನೋಟಿಸ್ ನ್ನು ಸೃಷ್ಟಿಸಿರುತ್ತೇವೆ ಅಂದರೆ ಸರಿಯಲ್ಲ. ಭದ್ರತೆಗಾಗಿ ನೀಡಿದ್ದ ಚೆಕ್ ನ್ನು ಈ ಪ್ರಕರಣದಲ್ಲಿ ದುರುಪಯೋಗಪಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ದಿಃ **02-03-2020** ರಂದು ರೂ. **2,67,051/-** ಹಣ ಬಾಕಿ ಇರುತ್ತದೆ ಎಂದು ಸ್ಟೇಟ್ ಮೆಂಟ್ ನಲ್ಲಿ ನಮೂದಿಸಲಾಗಿದೆ ಅಂದರೆ ಸರಿ. ಸದರಿ ಸ್ಟೇಟ್ ಮೆಂಟ್ ನಲ್ಲಿಯೇ ದಿಃ **26-03-2024** ರಂದು ಬಾಕಿ ಇರುವ ಅಸಲು ಮತ್ತು ಬಡ್ಡಿ ಎಂದು ರೂ.**4,91,022/-** ಎಂದು ತೋರಿಸಲಾಗಿದೆ ಅಂದರೆ ಸರಿ. ನಿಪಿಃ **5** ರ ಸ್ಟೇಟ್ ಮೆಂಟ್ ನ್ನು ನಾನೇ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ.

ನಿಪಿಃ **1** ರ ಚೆಕ್ ನ್ನು ನಾನೇ ರೂ. **4,80,000/-** ಗಳಿಗೆ ಬರೆದು ಹಾಕಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ಪಿಗಮಿ ಖಾತೆಯಲ್ಲಿ ಎಲ್ಲಾ ಹಣವನ್ನು ಮರುಪಾವತಿಸಿದ್ದು, ಆತನು ಭದ್ರತೆಗಾಗಿ ಕೊಟ್ಟಿದ್ದ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

**ಸಿ. ಸಿ. ನಂ. 2053/2024**

**ಪಿ ಡಬ್ಲ್ಯೂ: 1**

ಆರೋಪಿಗೆ ನಾನು ಕಳುಹಿಸಿದ್ದ ನೋಟಿಸ್ ಮುಟ್ಟಿದೆಯೋ ಇಲ್ಲವೋ ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ನಾನು ನೋಟಿಸ್ ನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿರುತ್ತೇನೆ. ಅಂಚೆ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿ.

ನಿಪಿಃ 4 ರಲ್ಲಿ ವಿಳಾಸದಲ್ಲಿ ನಮೂದಿಸಿರುವ ವ್ಯಕ್ತಿಗೆ ನೋಟಿಸ್ ಜಾರಿಯಾಗಿದೆ ಎಂದು ನಿಖರವಾಗಿ ನಮೂದು ಮಾಡಿರುವುದಿಲ್ಲ ಅಂದರೆ ಸರಿ. ಆರೋಪಿ ನಮ್ಮ ಸೊಸೈಟಿಗೆ ಸಾಲ ಮರು ಪಾವತಿ ಮಾಡಲು ಯಾವುದೇ ಸಾಲ ಬಾಕಿ ಇಲ್ಲದಿದ್ದರೂ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸಿವಿಲ್ ದಾವೆಯನ್ನು ಮತ್ತು ಸಂಘದ ಮುಂದೆ ಅರ್ಜಿಯನ್ನು ಸಲ್ಲಿಸಲು ಕಾಲಪರಿಮಿತಿ ಮುಗಿದಿರುವುದರಿಂದ ಆರೋಪಿ ಭದ್ರತೆಗಾಗಿ ನೀಡಿದ್ದ ಚೆಕ್ ನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.